# ಸಿವಿಲ್ ಜಡ್ಜ್ ಮತ್ತು ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಗ್ಗಡದೇವನಕೋಟೆ

## ಸಿ.ಸಿ. ನಂಃ 77/2015

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಜಿ.ವಿ. ಗೌರಿಶಂಕರ | ಪಿ.ಡಬ್ಲ್ಯೂ-04 |
| ತಂದೆಯ ಹೆಸರು | : | ಜಿ. ವೆಂಕಟೇಶ್ | ಎಎಸ್ಐ |
| ವಯಸ್ಸು | : | 55 ವರ್ಷ | |
| ಉದ್ಯೋಗ | : | ಎ.ಎಸ್.ಐ.<br>ಹೆಚ್.ಡಿ.ಕೋಟೆ ಪೋಲಿಸ್ ಠಾಣೆ | ಸಾಕ್ಷಿಗೆ ಪ್ರಮಾಣ ವಚನ ಭೋದಿಸಿದ<br>ದಿನಾಂಕಃ 02.12.2020 |
| ವಾಸಸ್ಥಳ | : | ಹೆಗ್ಗಡದೇವನಕೋಟೆ | ಕಲಂ 299 ಸಿಆರ್ ಪಿಸಿ ರೀತ್ಯಾ |

ಮುಖ್ಯ ವಿಚಾರಣೆಃ ಎಪಿಪಿ ರವರಿಂದಃ

ನಾನು ದಿಃ 15.01.2017 ರಿಂದ ಹೆಗ್ಗಡದೇವನಕೋಟೆಯ ಪೋಲಿಸ್ ಠಾಣೆಯಲ್ಲಿ ಎ.ಎಸ್.ಐ.ಆಗಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ. ಈ ಪ್ರಕರಣದಲ್ಲಿ ನ್ಯಾಯಾಲಯವು ಆರೋಪಿಯಾದ ರಾಜು ಬಿನ್ ಗುರುವೇಗೌಡ ರವರ ವಿರುದ್ದ ಹೊರಡಿಸಿದಂತಹ ಉದ್ಘೋಷಣಾ ಮತ್ತು ಜಪ್ತಿ ವಾರೆಂಟ್ ನ್ನು ದಿಃ 13.09.2020 ರಂದು ಸ್ವೀಕರಿಸಿ ಅವರು ವಾಸ ಮಾಡುತ್ತಿದ್ದಾರೆ ಎಂದು ಹೇಳಲಾದ ದಿಃ 15.09.2020 ರಂದು ಗಂಗಡಹೊಸಹಳ್ಳಿ ಗ್ರಾಮದ ಸರ್ಕಾರ ಹಿರಿಯ ಪ್ರಾಥಮಿಕ ಶಾಲೆ ಮುಂಭಾಗ, ಸಾರ್ವಜನಿಕರು, ಪಂಚಾಯಿತಿದಾರರು ಮತ್ತು ಬಾತ್ಮೀದಾರನ್ನು ಬರಮಾಡಿಕೊಂಡು ವಿಚಾರಣೆ ಮಾಡಿರುತ್ತೇನೆ. ಆರೋಪಿಯು ಹೀಗೆ ಮೂರು ನಾಲ್ಕು ವರ್ಷದಿಂದ ಕೊಡಗಿಗೆ ಕೂಲಿಗೆಂದು ಹೋಗಿರುತ್ತಾರೆ ಎಂದು ತಿಳಿಸಿರುತ್ತಾರೆ. ನಂತರ ಆರೋಪಿ ವಿರುದ್ದ ನ್ಯಾಯಾಲಯವು ಹೊರಡಿಸಿದ್ದಂತಹ ಉದ್ಘೋಷಣಾ ಮತ್ತು ಜಪ್ತಿ ವಾರೆಂಟ್ ನ್ನು ನೀಡಿರುವ ಬಗ್ಗೆ ಸಾರ್ವಜನಿಕರಿಗೆ ಮಾಹಿತಿಯನ್ನು ಕೊಟ್ಟಿರುತ್ತೇನೆ. ಆರೋಪಿಯ ತಲೆ ಮರೆಸಿಕೊಂಡಿರುವ ಬಗ್ಗೆ  ಟಂಟಂ ಮಾಡಿಸಿ, ಆರೋಪಿಯ ವಿರುದ್ದ ಹೊರಡಿಸಲಾದ ಉದ್ಘೋಷಣಾ ಪ್ರತಿಯನ್ನು ಗಂಗಡಹೊಸಹಳ್ಳಿ ಗ್ರಾಮದ ಸರ್ಕಾರ ಹಿರಿಯ ಪ್ರಾಥಮಿಕ ಶಾಲೆ ಮುಂಭಾಗದ ಕಾಪೌಂಡ್ ಗೋಡೆಗೆ ಅಂಟಿಸಿರುತ್ತೇನೆ. ಆರೋಪಿಯು ಕಂಡುಬಂದಲ್ಲಿ ಹತ್ತಿರದ ಪೋಲಿಸ್ ಠಾಣೆಗಾಗಲೀ ಅಥವಾ ಘನ ನ್ಯಾಯಾಲಯಕ್ಕೆ ತಿಳಿಸುವಂತೆ ಮನವಿ ಮಾಡಿರುತ್ತೇನೆ. ನಂತರ ಸ್ಥಳದಲ್ಲಿ ಮಹಜರ್ ನ್ನು ಜರುಗಿಸಿರುತ್ತೇನೆ.

ನಂತರ ಅದೇ ದಿನ ದಿಃ 15.09.2020 ರಂದು ನ್ಯಾಯಾಲಯದ ಆವರಣದ ಮುಂಭಾಗ ಆರೋಪಿಯ ಬಗ್ಗೆ ಸಾರ್ವಜನಿಕರಲ್ಲಿ ವಿಚಾರ ಮಾಡಲಾಗಿ, ಯಾರಿಗೂ ಆರೋಪಿಯ ಬಗ್ಗೆ ವಿಚಾರ ತಿಳಿದಿರುವುದಿಲ್ಲ. ನಂತರ ಸಾರ್ವಜನಿಕರಿಗೆ ಘನ ನ್ಯಾಯಾಲಯವು ಹೊರಡಿಸದಂತಹ ಉದ್ಘೋಷಣಾ ಮತ್ತು ಜಪ್ತಿ ವಾರೆಂಟ್ ನ ಬಗ್ಗೆ ತಿಳಿಸಿರುತ್ತೇನೆ. ನಂತರ ಆವರಣದ ಮುಂಭಾಗ ಟಂಟಂ ಮಾಡಿಸಿ, ಮಹಜರ್ ಕ್ರಮವನ್ನು ಜರುಗಿಸಿ ಉದ್ಘೋಷಣಾ ಪ್ರತಿಯನ್ನು ನ್ಯಾಯಾಲಯದ ಕಾಂಪೌಂಡ್ ಗೋಡೆಗೆ ಅಂಟಿಸಿರುತ್ತೇನೆ. ಆರೋಪಿಯು ಕಂಡುಬಂದಲ್ಲಿ ಹತ್ತಿರದ ಪೋಲಿಸ್ ಠಾಣೆಗಾಗಲೀ ಅಥವಾ ಘನ ನ್ಯಾಯಾಲಯಕ್ಕೆ ತಿಳಿಸುವಂತೆ ಮನವಿ ಮಾಡಿರುತ್ತೇನೆ.

ಆರೋಪಿಗೆ ಸಂಬಂಧಿಸಿದ ಚರಾಸ್ತಿ ಮತ್ತು ಸ್ಥಿರಾಸ್ತಿಗಳ ಬಗ್ಗೆ ದಿಃ 11.10.2020 ರಂದು ಆಲನಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯಕ್ಕೆ ಮನವಿಯನ್ನು ಸಲ್ಲಿಸಿರುತ್ತೇನೆ. ನಂತರ ದಿಃ 20.10.2020 ರಂದು ಆರೋಪಿಯ ಹೆಸರಿನಲ್ಲಿ ಯಾವುದೇ ಚರ ಮತ್ತು ಸ್ಥಿರ ಆಸ್ತಿಗಳು ಇರುವುದಿಲ್ಲ ಎಂಬ ವರದಿಯನ್ನು ಸ್ವೀಕರಿಸಿರುತ್ತೇನೆ ಅದನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸದರಿ ಆರೋಪಿಗೆ ಸಂಬಂಧಿಸಿದಂತೆ ದಿಃ 15.09.2020 ರಂದು ಗಂಗಡಹೊಸಹಳ್ಳಿ ಗ್ರಾಮದ ಸರ್ಕಾರ ಹಿರಿಯ ಪ್ರಾಥಮಿಕ ಶಾಲೆ ಮುಂಭಾಗ ಮಾಡಲಾದ ಮಹಜರ್ ನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ದಿಃ 15.09.2020 ರಂದು ನ್ಯಾಯಾಲಯದ ಆವರಣದ ಮುಂಭಾಗ ಮಾಡಿದ ಮಹಜರ್ ನ್ನು ಹಾಜರುಪಡಿಸಿದ್ದು ಅದನ್ನು ನಿಪಿ-3 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ದಿಃ 11.10.2020 ರಂದು ಆಲನಹಳ್ಳಿ ಗ್ರಾಮ ಪಂಚಾಯಿತಿ ಕಛೇರಿಗೆ ಆರೋಪಿಗೆ ಸಂಬಂಧಿಸಿದಂತೆ ಚರ ಮತ್ತು ಸ್ಥಿರ ಬಗ್ಗೆ ನೀಡಿದ ಮನವಿಯನ್ನು ನಿಪಿ-4 ಎಂದು, ದಿಃ 20.10.2020 ರಂದು ಆಲನಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯಿಂದ ನೀಡಲಾದ ಪತ್ರವನ್ನು ನಿಪಿ-5 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

(ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಒ.,

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೆಗ್ಗಡದೇವನಕೋಟೆ.